ಸ್ಥಾಪಿಸಲು ಸರ್ಕಾರವು ತೀರ್ಮಾನಿಸಿದ್ದು, ಈ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮವೇನು?

ಆ) ಹಾಗಿದ್ದಲ್ಲಿ, ಸಣ್ಣ ಕೈಗಾರಿಕೆಗಳನ್ನು (ಗ್ರೋತ್ ಸೆಂಟರ್) ಸ್ಥಾಪಿಸಲಾಗುವ ಮಾದರಿ ಹಾಗೂ ಪ್ರದೇಶಗಳ ವಿವರ ನೀಡುವುದು?

ಶ್ರೀ ವೆಂಕಟರಮಣಪ್ಪ (ಸಣ್ಣ ಕೈಗಾರಿಕೆಗಳು ಮತ್ತು ರೇಷ್ಮೆ ಸಚಿವರು) :

ಅ) ಸರ್ಕಾರದಿಂದ ಕೈಗಾರಿಕೆಗಳನ್ನು ನೇರವಾಗಿ ಸ್ಥಾಪಿಸಲಾಗುವುದಿಲ್ಲ. ಆದರೆ, ಕೈಗಾರಿಕೆಗಳನ್ನು ಸ್ಥಾಪಿಸಲು ಮುಂದೆ ಬರುವಂತಹ ಉದ್ಯಮಿಗಳಿಗೆ ಹೊಸ ಕೈಗಾರಿಕಾ ನೀತಿ 2009–14ರ ಪ್ರಕಾರ ಹಿಂದುಳಿದ, ಅತೀ ಹಿಂದುಳಿದ, ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ ಅತೀ ಸಣ್ಣ ಮತ್ತು ಸಣ್ಣ ಕೈಗಾರಿಕೆಗಳಿಗೆ ಹೆಚ್ಚಿನ ಪ್ರೋತ್ಸಾಹ ಘೋಷಿಸಲಾಗಿದೆ. ಅದರಲ್ಲಿ ಮುಖ್ಯವಾಗಿ ಹೊಸದಾಗಿ ಸ್ಥಾಪಿಸುವ ಸಣ್ಣ ಕೈಗಾರಿಕೆಗಳಿಗೆ ಸಹಾಯಧನವನ್ನು ಶೇ.10 ರಿಂದ 20 ವರೆಗೂ ಗರಿಷ್ಟ ರೂ.20.00 ಲಕ್ಷದವರೆಗೆ ; ಮುದ್ರಾಂಕ ಶುಲ್ಕ ವಿನಾಯಿತಿ ; ನೊಂದಣಿ ಶುಲ್ಕದಲ್ಲಿ ರಿಯಾಯಿತಿ ; ಭೂ ಪರಿವರ್ತನಾ ಶುಲ್ಕದ ಮಾಫಿ ; ಪ್ರದೇಶ ತೆರಿಗೆ ವಿನಾಯಿತಿ ಮತ್ತು ಇತರೆ ಸೌಲಭ್ಯಗಳನ್ನು ಒದಗಿಸಲಾಗುತ್ತದೆ.

ಆ) ರಾಜ್ಯದಲ್ಲಿರುವ ನಿರ್ದಿಷ್ಟವಾದ ಉತ್ಪನ್ನಗಳನ್ನು ತಯಾರಿಸುವ ಗುಂಪು ಕೈಗಾರಿಕೆಗಳ ಸ್ಥಾಪನೆಗೆ ಒತ್ತು ನೀಡಲಾಗಿದೆ. ಅತೀ ಮತ್ತು ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ ಸಣ್ಣ ಕೈಗಾರಿಕೋದ್ಯಮಿಗಳಿಗಾಗಿ ಕೆ.ಎಸ್.ಎಸ್.ಐ.ಡಿ.ಸಿ. ವತಿಯಿಂದ ಕೈಗಾರಿಕೆ ವಸಾಹತುಗಳನ್ನು ಮತ್ತು ಕೆ.ಐ.ಎ.ಡಿ.ಬಿ. ರವರ ವತಿಯಿಂದ ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸಿ ಹಂಚಿಕೆ ಮಾಡಲು ಕೈಗಾರಿಕಾ ವಿಕಾಸ ಯೋಜನೆಯಡಿಯಲ್ಲಿ ಈ ಸಂಸ್ಥೆಗಳಿಗೆ ಶೇ. 75ರ ವರೆಗೂ ಅನುದಾನ ಲಭ್ಯವಿರುತ್ತದೆ.

735 ಶ್ರೀ ಬಂಡೆಪ್ಪ ಕಾಶ್ಯಂಪೂರ್ (ಬೀದರ್ ದಕ್ಷಿಣ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯು ಅತೀ ಹಿಂದುಳಿದ ಜಿಲ್ಲೆಯಾಗಿದ್ದು, ದೊಡ್ಡ ಪ್ರಮಾಣದ ಕೈಗಾರಿಕೆಗಳ ಅಭಿವೃದ್ಧಿಯಾಗಿದೆಯೇ;

ಆ) ಹಾಗಿದ್ದಲ್ಲಿ, ಕೈಗಾರಿಕೆಗಳ ಅಭಿವೃದ್ಧಿಗಾಗಿ ಸರ್ಕಾರ ಪುನಃಶ್ಚೇತನಕ್ಕೆ ಕ್ರಮ ಕೈಗೊಳ್ಳುವುದೇ;

ಇ) ಕಳೆದ ವರ್ಷದಲ್ಲಿ ಬೀದರ್ ಜಿಲ್ಲೆಯಲ್ಲಿ ಯಾವುದಾದರೂ ಹೊಸ ದೊಡ್ಡ ಕೈಗಾರಿಕೆಗಳು ಪ್ರಾರಂಭವಾಗಿವೆಯೇ, (ವಿವರಗಳನ್ನು ನೀಡುವುದು);

ಈ) ಹೊಸದಾಗಿ ಪ್ರಾರಂಭಿಸಿದ ಕೈಗಾರಿಕೆಗಳಿಗೆ ಸರ್ಕಾರ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವುದೇ;

ಉ) ಹಾಗಿದ್ದಲ್ಲಿ, ಗ್ರಾಮೀಣ ಕೈಗಾರಿಕೆಗಳಿಗೆ ಸರ್ಕಾರ ನೀಡುವ ಮೂಲಭೂತ ಸೌಲಭ್ಯಗಳೇನು; (ವಿವರಗಳನ್ನು ನೀಡುವುದು);

ಶ್ರೀ ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಬೀದರ್ ಜಿಲ್ಲೆಯಲ್ಲಿ ಹಾಲಿ 4 ದೊಡ್ಡ ಪ್ರಮಾಣದ ಕೈಗಾರಿಕೆಗಳು ಸ್ಥಾಪಿತಗೊಂಡಿರುತ್ತವೆ. ಇನ್ನೂ ಹೆಚ್ಚಿನ ದೊಡ್ಡ ಕೈಗಾರಿಕೆಗಳನ್ನು ಸ್ಥಾಪಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.

ಆ) ಕೈಗಾರಿಕೆಗಳ ಅಭಿವೃದ್ಧಿಗಾಗಿ ಈಗಾಗಲೇ ಕ್ರಮ ವಹಿಸಿದ್ದು, ಹೊಸ ಕೈಗಾರಿಕಾ ನೀತಿ 2009–14ರಲ್ಲಿ ದೊಡ್ಡ ಹಾಗೂ ಬೃಹತ್ ಕೈಗಾರಿಕೆಗಳ ಸ್ಥಾಪನೆಗೆ ವಿವಿಧ ಪ್ರೋತ್ಸಾಹ/ರಿಯಾಯಿತಿಗಳನ್ನು ಘೋಷಿಸಿರುತ್ತದೆ. ಇವು ಕೆಳಕಂಡಂತಿರುತ್ತವೆ.

1. ಮುದ್ರಾಂಕ ಶುಲ್ಕ ವಿನಾಯಿತಿ.
2. ನೋಂದಣಿ ಶುಲ್ಕದಲ್ಲಿ ವಿನಾಯಿತಿ.
3. ಭೂ ಪರಿವರ್ತನಾ ಶುಲ್ಕ ವಿನಾಯಿತಿ.
4. ಪ್ರವೇಶ ತೆರಿಗೆ ವಿನಾಯಿತಿ.
5. ರಫ್ತು ಉದ್ದೇಶಿತ ಉದ್ಯಮಗಳಿಗೆ ಉತ್ತೇಜನಗಳು.
6. ಕೃಷಿ ಉತ್ಪನ್ನ ಮಾರುಕಟ್ಟೆ ತೆರಿಗೆಯಿಂದ ವಿನಾಯಿತಿ.
7. ತ್ಯಾಜ್ಯ ಸಂಸ್ಕರಣ ಸ್ಥಾವರ ಘಟಕಗಳಿಗೆ ಸಹಾಯಧನ.
8. ಮೌಲ್ಯವರ್ಧಿತ ತೆರಿಗೆ ಮೇಲೆ ಬಡ್ಡಿ ರಹಿತ ಸಾಲ ಸೌಲಭ್ಯ.
9. ಆಂಕರ್ ಘಟಕಗಳಿಗೆ ಸಹಾಯಧನ.

ಮೇಲ್ಕಂಡ ಪ್ರೋತ್ಸಾಹ/ರಿಯಾಯಿತಿಗಳ ಜೊತೆಗೆ ಹೊಸ ಕೈಗಾರಿಕಾ ಪ್ರದೇಶಗಳ ಸ್ಥಾಪನೆಗೆ ಒತ್ತು ಕೊಡಲಾಗುತ್ತಿದೆ.

ಇ) ಇಲ್ಲ.

ಈ) ಹೊಸ ಕೈಗಾರಿಕಾ ನೀತಿ 2009–14 ರಂತೆ, ಪ್ರತಿ ಜಿಲ್ಲೆಯಲ್ಲಿ 1000–2000 ಎಕರೆ ಪ್ರದೇಶದಲ್ಲಿ ಹೊಸ ಕೈಗಾರಿಕಾ ಪ್ರದೇಶ ಸ್ಥಾಪನೆಗೆ ಕ್ರಮ ವಹಿಸಲಾಗಿದ್ದು, ಇದರಂತೆ, ಬೀದರ್ ಜಿಲ್ಲೆಯಲ್ಲಿಯು ಕ್ರಮ ವಹಿಸಲಾಗುವುದು.

ಉ) ಗ್ರಾಮೀಣ ಕೈಗಾರಿಕೆಗಳಿಗೆ ಜಿಲ್ಲೆಯಲ್ಲಿ ಹೊಸದಾಗಿ ಸ್ಥಾಪಿತವಾಗುವ ಕೈಗಾರಿಕಾ ಪ್ರದೇಶಗಳಲ್ಲಿ/ವಸಾಹತುಗಳಲ್ಲಿ ಸ್ಥಳಾವಕಾಶವನ್ನು ಕಲ್ಪಿಸಲಾಗುವುದು. ಅಲ್ಲದೆ ಹೊಸ ಕೈಗಾರಿಕಾ ನೀತಿಯಂತೆ ವಿವಿಧ ಪ್ರೋತ್ಸಾಹ/ ರಿಯಾಯಿತಿಗಳನ್ನು ನೀಡಲಾಗುವುದು. ವಿವರಗಳು :

(ಆ) ನಲ್ಲಿ ತಿಳಿಸಿರುವ ಪ್ರೋತ್ಸಾಹ/ರಿಯಾಯಿತಿಗಳ ಜೊತೆಗೆ ಬಂಡವಾಳ ಪ್ರೋತ್ಸಾಹ ಸಹಾಯಧನ, ಬಡ್ಡಿ ರಿಯಾಯಿತಿ, ವಿದ್ಯುತ್ ತೆರಿಗೆ ವಿನಾಯಿತಿ ಹಾಗೂ ಯೋಜನಾ ತಯಾರಿಕಾ ವೆಚ್ಚವನ್ನು ಮರುಪಾವತಿ ಮಾಡುವ ಸೌಲಭ್ಯವನ್ನು ಸಹ ಕಲ್ಪಿಸಲಾಗಿದೆ.

ಉಪವಿಭಾಗಾಧಿಕಾರಿ ಕಾರ್ಯಾಲಯ ಸ್ಥಾಪಿಸುವುದು

718 ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆಯ, ಮುದ್ದೇಬಿಹಾಳ ಹಾಗೂ ಬಸವನ–ಬಾಗೇವಾಡಿ ತಾಲ್ಲೂಕುಗಳಿಗೆ ಸಂಬಂಧ ಪಡುವಂತೆ ಉಪವಿಭಾಗೀಯ ಕಾರ್ಯಾಲಯವನ್ನು ಬಸವನಬಾಗೇವಾಡಿಯಲ್ಲಿ ಹೊಸದಾಗಿ ಸ್ಥಾಪನೆ ಮಾಡುವ ವಿಚಾರ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಜೆ.ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ತಾಲ್ಲೂಕು ಪುನರ್ ರಚನೆ ಕುರಿತು ರಚಿಸಲಾಗಿದ್ದ ಶ್ರೀ ಎಂ.ಬಿ.ಪ್ರಕಾಶ್‌ರವರ ಅಧ್ಯಕ್ಷತೆಯಲ್ಲಿನ ಸಮಿತಿಯು ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ. ಅದರಲ್ಲಿ ಬಿಜಾಪುರ ಜಿಲ್ಲೆಯಲ್ಲಿ ನಾಲ್ಕು ಹೊಸ ತಾಲ್ಲೂಕುಗಳನ್ನು ರಚಿಸಲು ಮತ್ತು ಬಸವನಬಾಗೇವಾಡಿಯಲ್ಲಿ ಒಂದು ಹೊಸ ಉಪವಿಭಾಗವನ್ನು ತೆರೆಯಲು ಶಿಫಾರಸ್ಸು ಮಾಡಿದೆ.

ಆ) ವರದಿಯು ಪರಿಶೀಲನೆಯಲ್ಲಿದ್ದು, ಅಂತಿಮ ನಿರ್ಣಯ ತೆಗೆದುಕೊಳ್ಳಬೇಕಿದೆ.